# <u>ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಹರಪನಹಳ್ಳಿ</u> .

ಸಿ ಸಿ ನಂಃ343/2021

| ಸಿಡಬ್ಲ್ಯೂ | 4 | ಪಿಡಬ್ಲ್ಯೂ | 1 |
|---|---|---|---|

ಸಾಕ್ಷಿದಾರರ ಹೆಸರು : ರಾಮನಗೌಡ

ತಂದೆಯ ಹೆಸರು : ಭೀಮನ ಗೌಡ

ವಯಸ್ಸು : 38 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 31.01.2024

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ರಾಗಿಮಸಲವಾಡ

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ -</u>**

ಆರೋಪಿತರ ಪರಿಚಯ ನನಗೆ ಇರುತ್ತದೆ. ದಿಃ 07.10.2020 ರಂದು 2 ನೇ ಅರೋಪಿತನ ವಿರುದ್ಧ ಅಂಜೀನೇಯ ಸ್ವಾಮಿ ದೇವಸ್ಥಾನದಲ್ಲಿ ಅರ್ಚಕರಾಗಿದ್ದು ಅವರ ಸರ್ವಾಜನಿಕರಿಂದ ಹಣ ವಸೂಲಿ ಮಾಡುತ್ತಿದ್ದಾರೆಂದು ನನ್ನ ಚಿಕ್ಕಪ್ಪ ಚಾಸಾ 1 ರವರು ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ವಿಷಯಕ್ಕೆ ಸಂಬಂಧಿಸಿದಂತೆ ದಿಃ 24.10.2020 ರಂದು ಮದ್ಯಾಹ್ನ 1.00 ಗಂಟೆ ಸುಮಾರಿಗೆ ಉಪ ತಹಶೀಲ್ದಾರರಾದ ಚಾಸಾ 12 ರವರು ತಮ್ಮ ಸಿಬ್ಬಂದಿಗಳೊಂದಿಗೆ ಗ್ರಾಮಲೆಕ್ಕಾಧಿಕಾರಿ ಕಚೇರಿಗೆ ವಿಚಾರಣೆ ಮಾಡಲು ಬಂದಾಗ ಆ ದಿನ ಸ್ಥಳದಲ್ಲಿ ನಾನು ಹಾಗೂ ಚಾಸಾ 1 , 5 ರಿಂದ 7 ರವರು ಹಾಗೂ ಊರಿನ ಗ್ರಾಮಸ್ಥರು ಸೇರಿರುತ್ತಾರೆ. ವಿಚಾರಣೆ ಸಮಯದಲ್ಲಿ 2 ನೇ ಆರೋಪಿ 4 ನೇ ಆರೋಪಿತರ 7 ರಿಂದ 16 ಮತ್ತು 18 ನೇ ಆರೋಪಿತರೇಲ್ಲರೂ ಸೇರಿ ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡು ಬಂದು ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ ಏಕಾಏಕಿ ಹೊಡೆಯಲು ಬಂದಿರುತ್ತಾರೆ. 2 ನೇ ಆರೋಪಿತನು ತಮ್ಮ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ನೀಡಿ ವಿಚಾರಣೆ ಮಾಡಲು ಕರೆದಿರುತ್ತೀರಿ ಎಂದು ನನಗೆ 2 ನೇ ಆರೋಪಿಯು ಬಲಗೈ ಮುಂಗೈಗೆ ಕಾಲಿನಿಂದ ತುಳಿದಿರುತ್ತಾನೆ. ನಂತರ 1 ನೇ ಆರೋಪಿಯು ತನ್ನ ಕೈಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾನೆ. ನಂತರ ಚಾಸಾ 5 ರಿಂದ 11 ರವರು ಬಂದು ಸ್ಥಳದಲ್ಲಿ

ಸಿ ಸಿ ನಂಃ343/2021

| | | | |
|---|---|---|---|
| ಸಿಡಬ್ಲ್ಯೂ | 4 | ಪಿಡಬ್ಲ್ಯೂ | 1 |

ನಡೆಯುತಿರುವಂತಹ ಜಗಳವನ್ನು ಬಿಡಿಸಿರುತ್ತಾರೆ. ಆರೋಪಿತರೆಲ್ಲರೂ ನೀವು ಇಂದು ಉಳಿದಿಕೊಂಡಿದ್ದೀರಿ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಜೀವಬೆದರಿಕೆ ಹಾಕಿರುತ್ತಾರೆ. ನಂತರ ನಾವೆಲ್ಲರೂ ತೆಲಗಿ ಸರ್ಕಾರಿ ಅಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ. ನಂತರ ನನಗೂ ಮತ್ತು ಚಾಸಾ 6 ರವರಿಗೆ ವೈದ್ಯರ ಸಲಹೆ ಮೇರೆಗೆ ದಾವಣಗೆರೆಯ ಚಿಗಟೇರಿ ಜಿಲ್ಲಾ ಅಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ನಂತರ ಚಾಸಾ 1 ರವರು ಚಿಕಿತ್ಸೆಯನ್ನು ಪಡೆದು ಊರಿಗೆ ವಾಪಾಸ್ಸು ಬಂದು ಸದರಿ ಗಲಾಟೆಯ ಬಗ್ಗೆ ಊರಿನ ಹಿರಿಯರಿಗೆ ತಿಳಿಸಿರುತ್ತಾರೆ. ದಿಃ 25.10.2020 ರಂದು ರಾತ್ರಿ 9.00 ಗಂಟೆ ಸುಮಾರಿಗೆ ಚಾಸಾ 1, 8 ಚಾಸಾ 5 ರವರು ಮನೆಯ ಮುಂದಿನ ಅಂಗಳದಲ್ಲಿ ಕುಳಿತುಕೊಂಡಿರುವಾಗ 19 ರಿಂದ 25 ನೇ ಆರೋಪಿತರಗಳೆಲ್ಲರೂ ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡು ಬಂದು ಎಲ್ಲರೂ ನಿನ್ನೆಯ ದಿನ ನಾವು ಇಲ್ಲದ ಸಮಯದಲ್ಲಿ ಬಂದು ಜಗಳ ಮಾಡಿದ್ದೀರಾ ಈಗ ಬಾರ್ರೋ ಎಂದು ಅವಾಚ್ಯ ಶಬ್ದಗಳಿಂದ ಬೈದಾಡುತ್ತಾ 19 ನೇ ಆರೋಪಿತನು ಅಲ್ಲೇಯೆ ಬಿದಿದ್ದ ಒಂದು ಕಣಗದಿಂದ ಚಾಸಾ 1 ರವರ ಬೆನ್ನಿಗೆ ಹೊಡೆದಿರುತ್ತಾರೆ ನಂತರ ಚಾಸಾ 8 ಮತ್ತು 5 ರವರಿಗೆ ಆರೋಪಿತರು ಮೈಕೈಗೆ ಹೊಡೆದಿರುತ್ತಾರೆ. ಆ ದಿನ ಆರೋಪಿತರು ಹೊಡೆಯಲು ಬಳಸಿದ ಕಣಗವು ಈ ದಿನ ನ್ಯಾಯಾಲಯದ ಮುಂದೆ ಇದ್ದು ಅದನ್ನು ಈಗ ಮು.ಮಾ 1 ಎಂದು ಗುರುತಿಸಲಾಯಿತು. ಚಾಸಾ 1 ರವರು 29 .10.2020 ರಂದು ಠಾಣೆಗೆ ಹಾಜರಾಗಿ 2 ದಿನ ನಡೆದ ಜಗಳಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

ಸಿ ಸಿ ನಂಃ343/2021

| | | | |
|---|---|---|---|
| ಸಿಡಬ್ಲ್ಯೂ | 4 | ಪಿಡಬ್ಲ್ಯೂ | 1 |

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ-</u>**

**ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು ಯಾವುದೇ ಸಕಾರಣ ಕಂಡುಬಂದು ಇಲ್ಲದ ಕಾರಣ ಪ್ರಾರ್ಥನೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ